## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ನೀರಾವರಿ ನಿಗಮದ ಅಧೀನದಲ್ಲಿರುವ ಜಮೀನನ್ನು ತಹಶೀಲ್ದಾರ್ ಬಾದಾಮಿರವರಿಗೆ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣಕ್ಕಾಗಿ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ:ಇ-ಆಫೀಸ್ ಜಸಂಇ/29/ಎಂಪಿಜಡ್/2019, ಬೆಂಗಳೂರು, ದಿನಾಂಕ:01.02.2020 .

2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ ಕನೀನಿ/ಎಎಸ್ ಟಿ/ಸಿ-11/ನಿ.ಆಸ್ತಿ/ ಮಿ.ವಿ.ಸೌಧ/ಬಾದಾಮಿ/254/2019-20/1072, ದಿನಾಂಕ:28.05.2020

***

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಮಲಪ್ರಭಾ ಎಡದಂಡೆ ಕಾಲುವೆ ವಿಭಾಗ (ಎಂ.ಎಲ್.ಬಿ.ಸಿ ವಿಭಾಗ), ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬಾದಾಮಿ ಇವರ ಹೆಸರಿನಲ್ಲಿರುವ ಸರ್ವೆ ನಂ. 191, 191/ಅ ಮತ್ತು 192 ರಲ್ಲಿ ಒಟ್ಟು ವಿಸ್ತೀರ್ಣ 12-00 ಎಕರೆ ಜಮೀನಿನಲ್ಲಿ ಲಭ್ಯವಿರುವ 3-00 ಎಕರೆ ಹಾಲಿ ಖಾಲಿ ಇರುವ ಕರ್ನಾಟಕ ನೀರಾವರಿ ನಿಗಮದ ಅಧೀನದಲ್ಲಿರುವ ಜಮೀನನ್ನು ಬಾದಾಮಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣಕ್ಕಾಗಿ ಉಚಿತವಾಗಿ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಓದಲಾದ (2) ರಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕನೀನಿ ಇವರು ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಸಭೆ ಇವರ ಟಿಪ್ಪಣಿ ದಿನಾಂಕ:02.03.2020 ರಲ್ಲಿ ಸದರಿ ಮಿನಿ ವಿಧಾನ ಸೌಧ ನಿರ್ಮಿಸಲು 12.00 ಎಕರೆಯಲ್ಲಿ ಬೇರೆ ಕಡೆ ಜಾಗ ತೋರಿಸಿದ್ದರಿಂದ ಈ ಕಟ್ಟಡ ನಿರ್ಮಿಸಲು ತೊಂದರೆಯಾಗಿರುವ ಕಾರಣ ಸದರಿ ಮಿನಿ ವಿಧಾನ ಸೌಧವನ್ನು 12.00 ಎಕರೆ ಇರುವ ಜಮೀನಿನಲ್ಲಿ ನಿರ್ಮಿಸಲು ಸ್ಥಳ ಬದಲಾವಣೆ ಮಾಡಿ ಆದೇಶ ಹೊರಡಿಸಲು ಕೋರಿರುತ್ತಾರೆಂದು ವರದಿ ಮಾಡಿರುತ್ತಾರೆ.

ನೀರಾವರಿ ಕಾಲೋನಿ ಜಾಗವನ್ನು 1978-79 ಸಾಲಿನಲ್ಲಿ ಭೂಸ್ವಾಧೀನ ಮಾಡಿಕೊಳ್ಳಲಾಗಿದ್ದು, ಕಾರ್ಯ ನಿರ್ವಾಹಕ ಅಭಿಯಂತರರ ಕಛೇರಿ ಎಂ.ಎಲ್.ಬಿ.ಸಿ ವಿಭಾಗ ಬಾದಾಮಿ ಇವರ ಹೆಸರಿನಲ್ಲಿರುವ, ಬಾದಾಮಿ ನೀರಾವರಿ ಕಾಲೋನಿಯಲ್ಲಿರುವ ಸರ್ವೆ ನಂ. 192/2ಬ (ಕ್ಷೇತ್ರ 0 ಎಕರೆ 08 ಗುಂಟೆ), ಸರ್ವೆ ನಂ. 192/2ಕ (ಕ್ಷೇತ್ರ 0 ಎಕರೆ 29 ಗುಂಟೆ) ಮತ್ತು ಸರ್ವೆ ನಂ. 192/3 (ಕ್ಷೇತ್ರ 2 ಎಕರೆ 03 ಗುಂಟೆ) ರಲ್ಲಿನ ಒಟ್ಟು 3-00 ಎಕರೆ ಬದಲಿ ಜಾಗವನ್ನು ತಹಶೀಲ್ದಾರ್ ಬಾದಾಮಿ, ರವರಿಗೆ ಬಾದಾಮಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ ಮಾಡಲು ಪರಿಷ್ಕೃತ ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್, ಮಲಪ್ರಭಾ ನೀರಾವರಿ ಯೋಜನಾ ವಲಯ, ಧಾರವಾಡ ಇವರು ಸಲ್ಲಿಸಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು, ಕನೀನಿ ಇವರು ವರದಿ ಮಾಡಿರುತ್ತಾರೆ.

ಕಾರ್ಯನಿರ್ವಾಹಕ ಅಭಿಯಂತರರು ಎಂ.ಎಲ್.ಬಿ.ಸಿ ವಿಭಾಗ, ಕನೀನಿನಿ, ಬಾದಾಮಿ ಇವರ ಹೆಸರಿನಲ್ಲಿರುವ ಈಗಾಗಲೇ ಮಂಜೂರು ಮಾಡಿರುವ ಸರ್ವೆ ನಂ. 191, 191/ಅ ಮತ್ತು 192 ರಲ್ಲಿನ 3-00 ಎಕರೆ ಜಾಗದ ಬದಲಾಗಿ, ಬಾದಾಮಿ ನೀರಾವರಿ ಕಾಲೋನಿಯಲ್ಲಿರುವ ಸರ್ವೆ ನಂ. 192/2ಬ (ಕ್ಷೇತ್ರ 0 ಎಕರೆ 08 ಗುಂಟೆ) ಸರ್ವೆ ನಂ. 192/2ಕ (ಕ್ಷೇತ್ರ 0 ಎಕರೆ 29 ಗುಂಟೆ) ಮತ್ತು ಸರ್ವೆ ನಂ. 192/3 (ಕ್ಷೇತ್ರ 2 ಎಕರೆ 03 ಗುಂಟೆ) ಒಟ್ಟು 3-00 ಎಕರೆ ಬದಲಿ ಜಾಗದ ಕುರಿತಂತೆ, ನಿಗಮದ ನಿರ್ದೇಶಕರ ಮಂಡಳಿಯ ಘಟನೋತ್ತರ ಅನುಮೋದನೆಗೆ ಕಾದಿರಿಸಿ, ತಹಶೀಲ್ದಾರ್ ಬಾದಾಮಿ ರವರಿಗೆ ಬಾದಾಮಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ನೀರಾವರಿ ನಿಗಮದ ಜಾಗವನ್ನು ನಿಯಮಾನುಸಾರ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಒಪ್ಪಬಹುದಾಗಿದೆ ಎಂಬ ಶಿಫಾರಸ್ಸಿನೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರು ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ರವರು ಸಲ್ಲಿಸಿರುವ ಪರಿಷ್ಕೃತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ, ದಿನಾಂಕ:01.02.2020ರಲ್ಲಿ ಹೊರಡಿಸಲಾಗಿದ್ದ ಆದೇಶವನ್ನು ಹಿಂಪಡೆದು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ ಆಫೀಸ್ ಜಸಂಇ 29 ಎಂಪಿಜಿಡ್ 2019, ಬೆಂಗಳೂರು, ದಿನಾಂಕ:03.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ:01.02.2020ರ ಸರ್ಕಾರದ ಆದೇಶದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು ಎಂ.ಎಲ್.ಬಿ.ಸಿ ವಿಭಾಗ, ಕನೀನಿನಿ, ಬಾದಾಮಿ ಇವರ ಹೆಸರಿನಲ್ಲಿರುವ ಸರ್ವೆ ನಂ. 191, 191/ಅ ಮತ್ತು 192 ರಲ್ಲಿನ ಒಟ್ಟು ವಿಸ್ತೀರ್ಣ 12-00 ಎಕರೆ ಜಮೀನಿನಲ್ಲಿ ಲಭ್ಯವಿರುವ 3-00 ಎಕರೆ ಕರ್ನಾಟಕ ನೀರಾವರಿ ನಿಗಮದ ಹಾಲಿ ಖಾಲಿ ಜಾಗವನ್ನು ಬಾದಾಮಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ ಮಾಡಲು ಉಚಿತವಾಗಿ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಅನುಮೋದನೆ ನೀಡಲಾಗಿರುವ ಜಾಗದ ಬದಲಾಗಿ, ಬಾದಾಮಿ ನೀರಾವರಿ ಕಾಲೋನಿಯಲ್ಲಿರುವ ಸರ್ವೆ ನಂ. 192/2ಬ (ಕ್ಷೇತ್ರ 0 ಎಕರೆ 08 ಗುಂಟೆ), ಸರ್ವೆ ನಂ. 192/2ಕ (ಕ್ಷೇತ್ರ 0 ಎಕರೆ 29 ಗುಂಟೆ) ಮತ್ತು ಸರ್ವೆ ನಂ. 192/3 (ಕ್ಷೇತ್ರ 02 ಎಕರೆ 03 ಗುಂಟೆ) ರಲ್ಲಿನ ಒಟ್ಟು 3-00 ಎಕರೆ ಕರ್ನಾಟಕ ನೀರಾವರಿ ನಿಗಮದ ಜಾಗವನ್ನು ಉಚಿತವಾಗಿ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ರವೀಂದ್ರ ಕೊಂಡ
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಎ&ಇ)/(ಇ&ಆರ್‌ಎಸ್‌ಎ)/(ಜಿ&ಎಸ್‌ಎಸ್‌ಎ),ಕರ್ನಾಟಕ, ಪೋಸ್ಟ್ ಬ್ಯಾಗ್, "ಆಡಿಟ್ ಭವನ" ಅಂಚೆಪಟ್ಟಿಗೆ ಸಂಖ್ಯೆ:5393,ಬೆಂಗಳೂರು-1.
2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ
6. ಕಾರ್ಯನಿರ್ವಾಹಕ ಅಭಿಯಂತರರು, ಎಂ.ಎಲ್.ಬಿ.ಸಿ ವಿಭಾಗ, ಬಾದಾಮಿ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ, ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
10. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಇ-ಅಕೋ), ವಿಧಾನಸೌಧ, ಬೆಂಗಳೂರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.